**ಪಿ.ಡಬ್ಲ್ಯು: 2**

**ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.**

**ದಿನಾಂಕಃ 20-08-2025**

**ಪಾಟೀ ಸವಾಲುಃ 1 ರಿಂದ 4 ನೇ ಪ್ರತಿವಾದಿ ಪರ ಶ್ರೀ ಎಸ್ ಬಿ ಬಿ ವಕೀಲರಿಂದ,**

ನಾನು ವಾಹನ ಚಾಲಕ ವೃತ್ತಿಯನ್ನು ಸುಮಾರು ಆರು ವರ್ಷಗಳಿಂದ ಮಾಡುತ್ತಿದ್ದೇನೆ. ಅದಕ್ಕಿಂತ ಮೊದಲು ನಾನು ಮುಂಬಯಿನಲ್ಲಿ ಸುಮಾರು 20 ವರ್ಷಗಳವರೆಗೆ ಹೊಟೇಲ್ ನಲ್ಲಿ ಕೆಲಸ ಮಾಡುತ್ತಿದ್ದೆನು. ಆನಂತರ ಮೂರು ವರ್ಷ ಗೋವಾದಲ್ಲಿ ಹೊಟೇಲ್ ನಲ್ಲಿ ಕೆಲಸ ಮಾಡಿರುತ್ತೇನೆ. ಮುಂಬಯಿ ಮತ್ತು ಗೋವಾ ರಾಜ್ಯದಿಂದ ಊರಿಗೆ ಬಂದು ಚಾಲಕ ವೃತ್ತಿ ಮಾಡುತ್ತಿದ್ದೇನೆ ಎಂದರೆ ಸರಿ. ನಾನು ಸರಕು ಸಾಗಾಟ ಮಾಡುವ ಪಿಕಅಪ್ ವಾಹನವನ್ನು ಚಾಲನೆ ಮಾಡುತ್ತಿದ್ದೇನೆ. ಕಳೆದ ಬಕ್ರೀದ್ ಹಬ್ಬದ ಸಮಯದಲ್ಲಿ ಅಕ್ರಮ ಗೋಸಾಗಾಟ ಪ್ರಕರಣದಲ್ಲಿ ನಾನು ಚಾಲನೆ ಮಾಡುತ್ತಿದ್ದ ವಾಹನವನ್ನು ಪೊಲೀಸರು ಜಪ್ತುಪಡಿಸಿಕೊಂಡಿದ್ದರು ಎಂದರೆ ಸರಿ.

ದಾವಾ ಆಸ್ತಿಯು ಮೂಲತಃ ಮಂಜು ಗೊಂಡರವರಿಗೆ ಸೇರಿದ ಆಸ್ತಿ ಎಂದರೆ ಸರಿಯಲ್ಲ. ಮಂಜು ಗೊಂಡರವರಿಗೆ ಮೂರು ಜನ ಮಕ್ಕಳಿರುತ್ತಾರೆ. ಆದರೆ ಅವರ ಹೆಸರು ವಿವರ ನನಗೆ ಗೊತ್ತಿರುವುದಿಲ್ಲ. ತಿಮ್ಮಪ್ಪ, ಸಣ್ಣು ಮತ್ತು ಮಾಸ್ತಿ ಎಂಬವರು ಮಂಜು ಗೊಂಡರವರ ಮಕ್ಕಳು ಎಂದರೆ ಸರಿ. ವಾದಿ ಮತ್ತು 1 ರಿಂದ 4 ನೇ ಪ್ರತಿವಾದಿಯವರು ತಿಮ್ಮಪ್ಪ ಮಂಜು ಗೊಂಡರವರ ಮಕ್ಕಳು ಎಂದರೆ ಸರಿ. ಸದ್ರಿ ದಾವೆಯನ್ನು ಒಂದು ಆಸ್ತಿಯ ಸಲುವಾಗಿ ಪ್ರಕರಣ ದಾಖಲಿಸಲಾಗಿದೆ. ದಾವಾ ಆಸ್ತಿಯ ಅಕ್ಕಪಕ್ಕದಲ್ಲಿ ನನ್ನ ಜಮೀನು ಅಥವಾ ಮನೆ ಇರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನನ್ನ ಮನೆ ದಾವಾ ಆಸ್ತಿಯಿಂದ ಅರ್ಧ ಕಿಲೋಮೀಟರ್ ದೂರದಲ್ಲಿರುತ್ತದೆ ಎಂದು ನುಡಿಯುತ್ತಾರೆ.

ವಾದಿ ಈಗ ಮೂವತ್ತು ವರ್ಷದ ಹಿಂದೆ ಮದುವೆ ಆಗಿರುತ್ತಾರೆ ಎಂದರೆ ಸರಿ. ವಾದಿಯ ಗಂಡನ ಮನೆ ಅರವಕ್ಕಿ ಗ್ರಾಮ ಎಂದರೆ ಸರಿ. ದಾವಾ ಆಸ್ತಿಯಿಂದ ಅರವಕ್ಕಿ ಗ್ರಾಮ 15 ಕಿಲೋಮೀಟರ್ ದೂರದಲ್ಲಿರುತ್ತದೆ ಎಂದರೆ ಸರಿ. ವಾದಿ ಮತ್ತು ಪ್ರತಿವಾದಿಯರ ಚಿಕ್ಕಪ್ಪಂದಿರಾದ ಸಣ್ಣು ಮತ್ತು ಮಾಸ್ತಿಯವರ ನಡುವೆ ಮತ್ತು ತಿಮ್ಮಪ್ಪರವರ ನಡುವೆ ಆಸ್ತಿ ಪಾಲಾಗಿರುತ್ತದೆ ಎಂದರೆ ಸರಿ. ದಾವಾ ಆಸ್ತಿ 1 ರಲ್ಲಿ ವಾದಿ ಮತ್ತು ಪ್ರತಿವಾದಿಯರ ಚಿಕ್ಕಪ್ಪ ಮಾಸ್ತಿ ಮಂಜು ಗೊಂಡರವರ ಮನೆ ಇರುತ್ತದೆ ಎಂದರೆ ಸರಿಯಲ್ಲ. ಮಾಸ್ತಿ ಮಂಜು ಗೊಂಡ ಮರಣ ಹೊಂದಿದ ನಂತರ ಸದ್ರಿ ಆಸ್ತಿಯಲ್ಲಿ ಅವರ ಮಕ್ಕಳು ಮನೆ ಕಟ್ಟಿಕೊಂಡು ವಾಸ ಮಾಡುತ್ತಿದ್ದಾರೆ ಎಂದರೆ

ಸರಿಯಲ್ಲ. ವಾದಿ ಮತ್ತು ಪ್ರತಿವಾದಿಯರ ತಂದೆ ಮರಣ ಹೊಂದಿದ ನಂತರ ಅವರಿಗೆ ಬಂದಂತಹ ಆಸ್ತಿಯಲ್ಲಿ ಈದಿನದವರೆಗೆ ವಿಭಾಗ ಆಗಿಲ್ಲ ಎಂದರೆ ಸರಿ.

ವಾದಿ ಮನೆ ಕಟ್ಟಲು ಪ್ರಾರಂಭಿಸಿ ಈಗ ಮೂರು ವರ್ಷಗಳಾಗಿರುತ್ತದೆ. ಸಾಕ್ಷಿಗೆ ಒಂದು ಫೋಟೊ ತೋರಿಸಿ ಅದರಲ್ಲಿರುವ ಮನೆ ವಾದಿಯ ಮನೆ ಎಂದು ಹೇಳಿದ್ದಕ್ಕೆ ಸಾಕ್ಷಿ ಸದ್ರಿ ಫೋಟೊವನ್ನು ಗುರುತಿಸಿ ಹೌದು ಎಂದು ನುಡಿಯುತ್ತಾರೆ. ಸದ್ರಿ ಫೋಟೊವನ್ನು ನಿಡಿ-1 ಎಂದು ಗುರುತಿಸಲಾಯಿತು. ವಾದಿ ಕಟ್ಟುತ್ತಿರುವ ಮನೆ ಅವರ ತಂದೆ ತನಗೆ ಜಾಗ ಕೊಟ್ಟಿದ್ದಾರೆಂದು ವಾದಿ ಹೇಳಿದ ಆಧಾರದ ಮೇಲೆ ಹೇಳುತ್ತಿದ್ದೇನೆ. ಆ ಬಗ್ಗೆ ಯಾವುದೇ ದಾಖಲಾತಿಗಳನ್ನು ನಾನು ನೋಡಿರುವುದಿಲ್ಲ. ಸದ್ರಿ ಮನೆ ಕಟ್ಟಲು ಪ್ರತಿವಾದಿಯರು ಸಮ್ಮತಿ ಕೊಟ್ಟ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಗೆ ಸಂಬಂಧಪಟ್ಟಂತೆ ವಾದಿ ಮತ್ತು ಪ್ರತಿವಾದಿಯರ ನಡುವೆ ಗಲಾಟೆ ಆಗಿ ಪೊಲೀಸ್ ಠಾಣೆಗೆ ಹೋದ ವಿಚಾರ ವಾದಿ ಹೇಳಿದ ನಂತರ ನನಗೆ ಗೊತ್ತಾಗಿರುತ್ತದೆ. ಈದಿನದವರೆಗೆ ವಾದಿ ಮತ್ತು ಪ್ರತಿವಾದಿಯರ ನಡುವೆ ಗಡಿನಿಡಿಯಿಂದ ಪ್ರತ್ಯೇಕ ಆಗಿರುವುದಿಲ್ಲ ಎಂದರೆ ಸರಿ. ವಾದಿಗೆ ಅವರ ತಂದೆ ಹತ್ತು ಗುಂಟೆ ಜಮೀನು ನೀಡಿದ್ದರು ಆ ಜಾಗದಲ್ಲಿ ದಾವಾ ಹಾಕುವ ಪೂರ್ವದಲ್ಲಿ ವಾದಿ ಮನೆ ಕಟ್ಟಲು ಪ್ರಾರಂಭಿಸಿದ್ದರು, ಆಗ ನಿಡಿ-1 ರಲ್ಲಿ ತೋರಿಸಿದ ಮನೆ ಮತ್ತು ಗಿಡಗಳು ನೆಟ್ಟಿರುವುದು ಕಾಣಿಸುತ್ತದೆ ಎಂದರೆ ಸರಿಯಲ್ಲ. ಯಾವುದೇ ಕಾಲಕ್ಕೂ ವಾದಿಯ ತಂದೆ ವಾದಿಗೆ 1 ಎಕರೆ ಜಮೀನು ಪ್ರತ್ಯೇಕವಾಗಿ ಕೊಟ್ಟಿಲ್ಲ ಆದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವಾ ಆಸ್ತಿಯ ಅ ಪರಿಶಿಷ್ಟದ 1 ನೇ ಆಸ್ತಿ ಸರ್ವೇ ನಂಬರ 266 ರ ಜಮೀನು ರಸ್ತೆಗೆ ತಾಗಿ ಹೊಂದಿಕೊಂಡು ಇರುತ್ತದೆ ಎಂದರೆ ಸರಿ. ಇತರ ದಾವಾ ಆಸ್ತಿಗಳು ಸಾಗುವಳಿ ಗದ್ದೆ ಇರುತ್ತವೆ ಎಂದರೆ ಸರಿ. ಸದ್ರಿ ದಾವಾ ಆಸ್ತಿಯ ಅ ಪರಿಶಿಷ್ಟದ 1 ನೇ ಆಸ್ತಿ ಸರ್ವೇ ನಂಬರ 266 ರಸ್ತೆಗೆ ತಾಗಿಕೊಂಡು ಇರುವುದರಿಂದ ಅದಕ್ಕೆ ಹೆಚ್ಚು ಬೆಲೆ ಬರುತ್ತದೆ ಎಂದು ದುರುದ್ದೇಶದಿಂದ ವಾದಿ ಸುಳ್ಳು ಪ್ರಕರಣವನ್ನು ದಾಖಲಿಸಿದ್ದಾರೆ ಎಂದರೆ ಸರಿಯಲ್ಲ. ವಾದಿ ಪ್ರಾಯಸ್ಥಳಾದಾಗಿನಿಂದ ಮದುವೆ ಮಾಡಿಕೊಂಡು ತನ್ನ ಗಂಡನ ಮನೆಯಲ್ಲಿದ್ದು ನಾನು ಸುಮಾರು 23 ವರ್ಷಗಳವರೆಗೆ ಹೊರರಾಜ್ಯದಲ್ಲಿ ಕೆಲಸ ಮಾಡುತ್ತಿದ್ದೆನು, ಅದಕ್ಕಾಗಿ ದಾವಾ ಆಸ್ತಿಗಳ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಆದರೂ ಸಹ ವಾದಿಯ ಮಾತು ಕೇಳಿ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಅ ಪರಿಶಿಷ್ಟದ 1 ನೇ ಆಸ್ತಿ ಸರ್ವೇ ನಂಬರ 266 ರಲ್ಲಿ ವಾದಿ ಮತ್ತು ಪ್ರತಿವಾದಿಯರ ತಂದೆಯ ಸಹೋದರ

ಮಾಸ್ತಿ ಗೊಂಡ ಹಾಗೂ ಅವರ ಮಕ್ಕಳ ಮನೆ ಮತ್ತು ತೋಟದಲ್ಲಿ ವಹಿವಾಟು ಮತ್ತು ಸ್ವಾಧೀನದಲ್ಲಿದ್ದರೂ ಸಹ ವಾದಿಯ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮನೆ ದಾವಾ ಆಸ್ತಿಯಿಂದ ಒಂದುವರೆ ಕಿಲೋಮೀಟರ್ ಗಿಂತ ದೂರ ಇರುವುದರಿಂದ ಅ ಪರಿಶಿಷ್ಟದ 1 ನೇ ಆಸ್ತಿ ಸರ್ವೇ ನಂಬರ 266 ರ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ –ಇಲ್ಲ.**

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**ಸಹಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**